ಶ್ರೀ ಜೀವರಾಜ್ ಆಳ್ವ.—ಹಣಕಾಸಿನ ಕೊರತೆಯಿರುವುದರಿಂದ ಅನುದಾನವನ್ನು ಹೆಚ್ಚು ಮಾಡುವುದಕ್ಕೆ ಅವಕಾಶವಿಲ್ಲ. ೧೯೮೫ರಲ್ಲಿ ಯಾವ ರ್ಯಾಲಿ ಕಾರ್ಯಕ್ರಮಕ್ಕೋಸ್ಕರ ೫೦ ಸಾವಿರ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದೇವೆ. ಆದೇ ತರಹ ಯಾವುದಾದರೂ ಹೊಸ ಯೋಜನೆಯನ್ನು ಹಾಕಿಕೊಂಡರೆ, ಆದಕ್ಕೆ ಹಣವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀಮತಿ ಮುಂಕ್ತರುನ್ನೀಸಾ ಬೇಗಂ.—೫೦ ಸಾವಿರ ರೂಪಾಯಿಗಳನ್ನು ಯಾವ ರ್ಯಾಲಿಗೆ ಕೊಟ್ಟಿದ್ದೇನೆಂದು ಹೇಳಿದ್ದೀರಿ. ರಾಜ್ಯದಾದ್ಯಂತ ತುಂಬ ಹುಡುಗರಿದ್ದಾರೆ. ಪಾವ್ಯುಲೇಷನ್ ಕೂಡ ಜಾಸ್ತಿಯಿದೆ. ಇದು ತುಂಬಾ ಕಡಿಮೆಯಾಗಿದೆ. ಹೆಚ್ಚು ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡಂತ್ತೀರಾ ?

ಶ್ರೀ ಜೀವರಾಜ್ ಆಳ್ವ.—ಇದು ಸೇವಾದಳಕ್ಕೆ ಸಂಬಂಧಪಟ್ಟಿರುವುದು.

ಶ್ರೀಮತಿ ಮುಂಕ್ತರುನ್ನೀಸಾ ಬೇಗಂ.—ಹಣ ಬಹಳ ಕಡಿಮೆಯಿದೆಯೆಂದು ೨೫ ಸಾವಿರ ರೂಪಾಯಿ ಗಳನ್ನು ಸೇವಾದಳಕ್ಕೆ ಮಂಜೂರು ಮಾಡಿದ್ದೀರಿ. ಏಕೆ ಇಷ್ಟು ಕಡಿಮೆಯಿದೆ ?

ಶ್ರೀ ಜೀವರಾಜ್ ಆಳ್ವ.—ಬರುವ ಹಣಕಾಸು ವರ್ಷದಲ್ಲಿ ಹೆಚ್ಚಿನ ಅನುದಾನವನ್ನು ಕೊಡುವು ದಕ್ಕೆ ಪ್ರಯತ್ನ ಮಾಡುತ್ತೇನೆ.

ಗೂಂಡಾ ಕಾನೂನು ಬಗ್ಗೆ.

೪೬೭. ಶ್ರೀ ಕೆ. ಹೆಚ್. ಶ್ರೀನಿವಾಸ್, (ಶಿವಮೊಗ್ಗ).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗೂಂಡಾಗಳನ್ನು ಸ್ಥಾನಬದ್ಧತೆಯಲ್ಲಿಡಲು ಸರ್ಕಾರಕ್ಕೆ ಅಧಿಕಾರ ಕೊಡುವ ಒಂದು ವಿಶೇಷ ಕಾಯಿದೆ ರಾಜ್ಯದಲ್ಲಿ ಜಾರಿಯಲ್ಲಿರುವುದು ಸರಿಯೇ ?

ಆ) ಹಾಗಾದರೆ ಈ ಕಾಯಿದೆಯು ಎಂದಿನಿಂದ ಜಾರಿಯಲ್ಲಿದೆ ?

ಇ) ಈ ಕಾಯಿದೆಯ ವಿಧಿಗಳನ್ವಯ ಸ್ಥಾನಬದ್ಧತೆಯಲ್ಲಿಡಲಾದ ಗೂಂಡಾಗಳ ಸಂಖ್ಯೆ ಎಷ್ಟು ?

ಈ) ತದ ನಂತರ ಬಿಡುಗಡೆ ಮಾಡಲ್ಪಟ್ಟ ಬಂಧಿಗಳೆಷ್ಟು ಹಾಗೂ ಅಂತಹ ಬಿಡುಗಡೆಗೆ ಕಾರಣ ಗಳೇನು ?

ಉ) ಪ್ರಕೃತ ಸ್ಥಾನ ಬದ್ಧತೆಯಲ್ಲಿರುವ ವ್ಯಕ್ತಿಗಳ ಸಂಖ್ಯೆ ಎಷ್ಟು ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ) ಹೌದು

ಆ) ಕರ್ನಾಟಕ ಕಳ್ಳಭಟ್ಟಿದಾರರು, ಔಷದ ಅಪರಾಧಿಗಳು ಜೂಜುಕೋರರು, ಗೂಂಡಾಗಳು, ಅನೈತಿಕ ವ್ಯವಹಾರದ ಅಪರಾಧಿಗಳು, ಪುಂಡ ಕೊಳೆಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯ ಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ ಅಧಿನಿಯಮವು ೧೯೮೫ (ಕರ್ನಾಟಕ ಕಾಯಿದೆ ೧೨, ೧೯೮೫)ವು ೧೫ನೇ ಡಿಸೆಂಬರ್ ೧೯೮೪ರಿಂದ ಜಾರಿಯಲ್ಲಿದೆ.

ಇ) ೨೬ (ಇಪ್ಪತ್ತಾರು)

ಈ) ೨೪ (ಇಪ್ಪತ್ತನಾಲ್ಕು)

ಈ ಪೈಕಿ

೧) ಹದಿನೈದು ಜನರ ವಿರುದ್ಧ ಸ್ಥಾನ ಬದ್ಧತೆಯ ಪ್ರಾಧಿಕಾರಿಗಳು ಹೊರಡಿಸಿದ ಸ್ಥಾನ ಬದ್ಧತೆಯ ಆಜ್ಞೆಗಳನ್ನು ಸರ್ಕಾರವು ಮಾನ್ಯ ಮಾಡದಿದ್ದುದರಿಂದ ೧೫ ಜನರನ್ನು ಬಿಡುಗಡೆ ಮಾಡ ಲಾಯಿತು,

೨) ಸ್ಥಾನಬದ್ಧತೆಗೆ ಸಾಕಷ್ಟು ಕಾರಣಗಳಿಲ್ಲವೆಂದು ಸಲಹಾ ಮಂಡಳಿಯು ವರದಿ ಮಾಡಿದುದ ರಿಂದ ರಾಜ್ಯ ಸರ್ಕಾರವು ನಾಲ್ವರನ್ನು ಬಿಡುಗಡೆ ಗೊಳಿಸಿದೆ. ಮುತ್ತು

೩) ಬಂಧಿತರು / ಅವರ ಪರವಾಗಿ ಸಲ್ಲಿಸಿದ ರಿಟ್ ಅರ್ಜಿಗಳ ಮೇಲೆ ೫ ಜನರನ್ನು ಉಚ್ಚ ನ್ಯಾಯಾಲಯವು ಬಿಡುಗಡೆ ಮಾಡಿದೆ.

ಉ) ೨ (ಎರಡು)

ಶ್ರೀ ಕೆ. ಹೆಚ್. ಶ್ರೀನಿವಾಸ್.— ಈ ಗೂಂಡಾ ಕಾಯಿದೆಯನ್ನು ಇಲ್ಲಿ ಪಾಸ್ ಮಾಡುವ ಹೊತ್ತಿನಲ್ಲಿ ಇಂತಹ ಕಾಯಿದೆ ಅತ್ಯಗತ್ಯ ಇದೆ, ಇದನ್ನು ಕೊಟ್ಟರೆ ಬಹಳ ದೊಡ್ಡ ಪರಾಕ್ರಮ ಮಾಡಿ ಗೂಂಡಾಗಿರಿ ನಿಲ್ಲಿಸುವುದಾಗಿ ಆಶ್ವಾಸನೆಯನ್ನು ಈ ಸದನಕ್ಕೆ ಕೊಟ್ಟಿದ್ದಿರಿ. ಇದರ ಪ್ರಕಾರ ಒಟ್ಟು ೨೬ ಜನರನ್ನು ಬಂಧಿಸಿದ್ದೀರಿ. ೧೫ ಜನರನ್ನು ಸರ್ಕಾರ ಬಿಡುಗಡೆ ಮಾಡಿದೆ. ಸ್ಥಾನ ಬದ್ಧತೆಗೆ ಸಾಕಷ್ಟು ಕಾರಣಗಳಿಲ್ಲವೆಂದು ಸಲಹಾ ಮಂಡಳಿಯು ವರದಿ ಮಾಡಿದುದರಿಂದ ರಾಜ್ಯ ಸರ್ಕಾರವು ನಾಲ್ವರನ್ನು ಬಿಡುಗಡೆ ಮಾಡಿದೆ. ಬಂಧಿತರ ಪರವಾಗಿ ಸಲ್ಲಿಸಿದ ರಿಟ್ ಅರ್ಜಿಗಳ ಮೇಲೆ ೫ ಜನರನ್ನು ಉಚ್ಚ ನ್ಯಾಯಾಲಯವು ಬಿಡುಗಡೆ ಮಾಡಿದೆ. ಇನ್ನು ಉಳಿದ ೨ ಜನರು ಮಾತ್ರ ಸ್ಥಾನಬದ್ಧತೆಯಲ್ಲಿದ್ದಾರೆಂದು ತಿಳಿಸಿದ್ದೀರಿ. ಇದನ್ನು ನೋಡಿದರೆ ಈ ಕಾನೂನು ತಪಂಗೆ ಆಗತ್ಯ ಇರಲಿಲ್ಲ ಎಂದು ಕಾಣುತ್ತದೆ. ಏನು ಕಾನೂನು ಕೊಟ್ಟರೂ ನಿಮ್ಮ ಕೈಯಲ್ಲಿ ಆಗುವುದಿಲ್ಲ. ನೀವು ಬಿಡುಗಡೆ ಮಾಡುತ್ತೀರಿ. ಸಲಹಾ ಮಂಡಲಿ ವರದಿ ಮಾಡಿದುದರಿಂದ ಬಿಡುಗಡೆ ಮಾಡುತ್ತೀರಿ. ಇವೆಲ್ಲಾ ನೋಡಿದರೆ, ಇದರ ಬಗ್ಗೆ ತಾವು ಅರ್ಥೈಸಿಕೊಳ್ಳುವುದರಲ್ಲಿ ತಪ್ಪು ಇರಬೇಕು, ಇದರ ಬಗ್ಗೆ ಪರಿಶೀಲನೆ ಮಾಡಿದ್ದೀರಾ ? ನೀವು ಅಧಿಕಾರಕ್ಕೆ ಬಂದಮೇಲೆ ಗೂಂಡಾಗಳು ಇಲ್ಲಿಂದ ರಫ್ತು ಆಗಿದ್ದಾರೆಯೇ, ಅಥವಾ ಒಳ್ಳೆಯವರಾಗಿದ್ದಾರೆಯೇ ? ಒಟ್ಟು ಕರ್ನಾಟಕ ರಾಜ್ಯದಲ್ಲಿ ಎರಡೂ ಜನ ಮಾತ್ರ ಗೂಂಡಾಗಳು ಉಳಿದಿದ್ದಾರೆಯೇ, ಆ ಇಬ್ಬರು ಯಾರು ಎಂದು ಹೇಳಿದರೆ ಪರಮವೀರಚಕ್ರ ಕೊಡಬಹುದು.

ಶ್ರೀ ಬಿ. ರಾಚಯ್ಯ.— ಕಾನೂನು ಪ್ರಕಾರ, ನಮ್ಮ ಲಾ ಡಿಪಾರ್ಟ್‌ಮೆಂಟ್ ಅಭಿಪ್ರಾಯದ ಪ್ರಕಾರ ಕೋರ್ಟಿಗೆ ಹೋದರೆ ಇದು ನಿಲ್ಲುವುದಿಲ್ಲ ಎಂದೂ ಅಭಿಪ್ರಾಯ ಕೊಟ್ಟರು, ಆ ದೃಷ್ಟಿಯಿಂದ ೧೫ ಜನರನ್ನು ಬಿಡುಗಡೆ ಮಾಡಬೇಕಾಗಿ ಬಂತು ೫ ಜನರು ಕೋರ್ಟಿಗೆ ಹೋಗಿದ್ದರಿಂದ, ಅವರನ್ನು ಬಿಡುಗಡೆ ಮಾಡಿದೆ, ಸಲಹಾ ಮಂಡಳಿ ವರದಿ ಮಾಡಿದುದರಿಂದ ೪ ಜನರು ಬಿಡುಗಡೆ ಮಾಡಿದೆ. ಇನ್ನು ಇಬ್ಬರು ಮಾತ್ರ ಉಳಿದುಕೊಂಡಿದ್ದಾರೆ. ಅಡ್ವೈಸರಿ ಬೋರ್ಡ್‌ನಲ್ಲಿ ಹೈಕೋರ್ಟ್ ಜಡ್ಜ್ ಅಧ್ಯಕ್ಷರಾಗಿದ್ದಾರೆ. ಇನ್ನು ಎರಡೂ ಜನ ಹೈಕೋರ್ಟಿನವರೆ ಜಡ್ಜ್‌ಸ್ ಇದ್ದಾರೆ. ಅವರು ಬಿಡುಗಡೆ ಮಾಡಬೇಕೆಂದು ಹೇಳಿದ್ದರಿಂದ ಮಾಡಿದ್ದೇವೆ. ಈಗ ಕೋರ್ಟ್ ಯಾವ ಯಾವ ಕಾರಣಕ್ಕೋಸ್ಕರ ಬಿಡುಗಡೆ ಮಾಡಿದೆ ಎನ್ನುವುದನ್ನು ಗವರ್ನಮೆಂಟಿನಲ್ಲಿಟ್ಟುಕೊಂಡು ಇನ್ನು ಮುಂದೆ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ. ಇಲ್ಲಿ ಕೆಲವು ತಿದ್ದುಪಡಿ ಆಗಬೇಕಾಗಿದೆ. ಇದರ ಬಗ್ಗೆ ಕಾಲಾವಕಾಶ ಇದ್ದರೆ ಈ ಒಂದು ಅಧಿವೇಶನದಲ್ಲಿಯೇ ತರುತ್ತೇವೆ.

ಶ್ರೀ ಗೋಪಾಲ ಮುಂಕುಂದ ಕಾನಡೆ.— ಎರಡು ಜನ ಮಾತ್ರ ಸ್ಥಾನಬದ್ಧತೆಯಲ್ಲಿದ್ದಾರೆ ಅಂದರೆ ಈ ಕಾಯಿದೆ ತೆಗೆದುಹಾಕಿ, ಈ ಕಾಯಿದೆ ಏತಕ್ಕೆ ? ಇನ್ನು ಶಾಸಕರ ಭವನದಲ್ಲಿ ಪೋಲೀಸರು ಬಂದು ಚೆಕ್ ಮಾಡತಕ್ಕದ್ದು ನಡೆಯುತ್ತಿದೆ ನಮ್ಮ ಸ್ನೇಹಿತರ ರೂಮಿನಲ್ಲೆಲ್ಲಾ ಬಂದೂ ಹೋಗಿದ್ದಾರೆ. ಅವರು ಬಾಂಬುಗಳಿನಲ್ಲಿ ಒಳಗಡೆ ಬರುತ್ತಾರೆ. ಶಾಸಕರ ಭವನಕ್ಕೆ ಈ ಗೂಂಡಾ ಕಾಯಿದೆ ಅನ್ವಯಿಸುತ್ತಿದೀರಾ, ಇದು ಮರ್ಡರ್ ಮಾಡಿದವರಿಗೆ ದರೋಡೆ ಮಾಡಿದವರಿಗೆ ಬರುವುದಿಲ್ಲವೆ ? ಈಗ ನಮ್ಮ ರೂಮುಗಳಲ್ಲಿ ನಾಲ್ಕು ಗಂಟೆಗೆ ಬರುತ್ತಾರೆ ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಬಿ. ರಾಚಯ್ಯ.— ಗೂಂಡಾಗಳು ಎಲ್ಲಿ ಅಡಗಿಕೊಂಡಿರುತ್ತಾರೆ, ಅಲ್ಲಿಗೆ ಪೋಲೀಸರು ಹೋಗಿರುತ್ತಾರೆ, ಪೋಲೀಸರಿಗೆ ನಾನು ನಿರ್ದೇಶನ ಕೊಟ್ಟಿಲ್ಲ. ಎಲ್ಲೆಲ್ಲಿ ಸಂಶಯ ಇದೆ ಅಲ್ಲಿ ವಿಚಾರ ಮಾಡಿರಬಹುದು ಅದನ್ನು ನಾನು ವಿಚಾರಿಸುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ನಮ್ಮ ರೂಮುಗಳಲ್ಲಿ ನಮ್ಮ ಹೆಂಡತಿ ಮಕ್ಕಳು ಇರುತ್ತಾರೆ, ಅಲ್ಲಿಗೆ ಪೋಲೀಸರು ಬರುವುದು ಸರಿಯೇ ?

(ಗೊಂದಲ)

ಅಧ್ಯಕ್ಷರು.— ಮಾನ್ಯ ಶ್ರೀನಿವಾಸ್‌ರವರು ಫಸ್ಟ್ ಕ್ವೆಶ್ಚನ್ ಹಾಕಿದರು, ಸೆಕೆಂಡ್ ಟೈಮ್‌ಗೆ ಅವಕಾಶ ಕೊಡುವಾಗ ಕಾನಡೆ ಅವರು ಎದ್ದರು, ಅದಕ್ಕೆ ಅವರಿಗೆ ಅವಕಾಶ ಕೊಟ್ಟೆ. ಈಗ ಶ್ರೀನಿವಾಸ್ ಅವರನ್ನು ಕರೆದಿದ್ದೇನೆ ಅವರು ಮಾತ್ರ ಪ್ರಶ್ನೆ ಕೇಳಬೇಕು.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಮಾನ್ಯ ಸಚಿವರು ಮಂತ್ರಿ ಅವರು ತಮ್ಮ ಕಾವೆಂಟರಿಯನ್ನು ಕೊಟ್ಟಿದ್ದಾರೆ. ಪದೇ ಪದೇ ಹೇಳುತ್ತಿದ್ದೇನೆ, ರಾಜ್ಯದಲ್ಲಿರತಕ್ಕ ಗೂಂಡಾಗಿರಿಯನ್ನು ಹತ್ತಿಕ್ಕುವುದಕ್ಕೆ ಈ ಒಂದು ಶಾಸನ ಆಗಿದೆ. ಈ ಬಗ್ಗೆ ಹೆಚ್ಚು ಕಡಿಮೆ ಒಮ್ಮತದಿಂದ ಅಭಿಪ್ರಾಯ ಕೊಟ್ಟೆವು. ಈ ಒಂದು ಶಾಸನ ಬೇಕೋ, ಬೇಡವೋ ಎಂದು ಭಿನ್ನಾಬಿಪ್ರಾಯ ಇದ್ದರೂ ಗೂಂಡಾಗಿರಿಯನ್ನು ಹತ್ತಿಕ್ಕುವುದಕ್ಕೆ ಈ ಕಾಯಿದೆ ಪಾಸ್ ಮಾಡಿಕೊಟ್ಟಿದ್ದು. ಇಷ್ಟು ದಿವಸಕ್ಕೆ ೨೬ ಜನರನ್ನು ಹಿಡಿದು ೨೪ ಜನರನ್ನು ಬಿಡುಗಡೆ ಮಾಡಿ ೨ ಜನರನ್ನು ಮಾತ್ರ ಸ್ಥಾನಬದ್ಧತೆಯಲ್ಲಿಟ್ಟು. ಇನ್ನು ಮುಂದೆ ಪರಿಶೀಲನೆ ಮಾಡುತ್ತೇವೆಂದರೆ ಇಷ್ಟೊಂದು ವಿಶೇಷ ಅಧಿಕಾರ ತೆಗೆದುಕೊಂಡ ಉದ್ದೇಶ ಏನು ? ನಾವು ಸರ್ಕಾರದಿಂದ ವಿವರಣೆಯನ್ನು ನಿರೀಕ್ಷೆ ಮಾಡುವುದಿಲ್ಲ. ಸರಿಯಾದ ಉತ್ತರ ಬೇಕು. ಇವತ್ತು ಗುಂಡಾಗಿರಿ ನಡೆಯುತ್ತಿಲ್ಲವೆ? ಸಾಕಷ್ಟು ಶಾಂತಿ ಸುವ್ಯವಸ್ಥೆ ಇದ್ದು ಅದರಿಂದ ತಮಗೆ ತೃಪ್ತಿ ಆಗಿದೆಯೇ ? ಈಗ ಕಾನೂನು ವ್ಯವಸ್ಥೆ ಸರಿಯಿಲ್ಲ. ತಮಗೆ ಬೇರೆಯದಕ್ಕೆ ಏನಾದರೂ ತೊಂದರೆ ಇದ್ದರೆ ಸಂಗ್ರಿವಾಜ್ಞೆ ಮಾಡುತ್ತೀರಿ ಅದೇ ರೀತಿ ಇದಕ್ಕೂ ತಿದ್ದುಪಡಿ ಅಗತ್ಯ ಇದ್ದರೆ ಅವತ್ತೇ ಮಾಡಿಕೊಳ್ಳಬೇಕಾಗಿತ್ತು. ತಾವು ಇಷ್ಟೊಂದು ದೊಡ್ಡ ಅಸ್ತ್ರ ತೆಗೆದುಕೊಂಡು ಈ ರೀತಿಯ ವಿವರಣೆ ಕೊಡುವುದು ಸರಿಯಲ್ಲ. ಈಗ ಇದು ಬೇಕೋ ಅಥವಾ ಬೇಡವೋ, ಈ ಕಾನೂನಿನಲ್ಲಿ ತೊಂದರೆ ಇದ್ದರೆ ಇಂತಹ ತೊಂದರೆ ಇದೆ ಎಂದು ಈ ಸದನಕ್ಕೆ ತಂದು ಜವಾಬ್ದಾರಿಯಿಂದ ಉತ್ತರ ಕೊಡಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.— ಈ ಕಾನೂನು ಅವಶ್ಯಕತೆ ಇದೆ ಎಂದು ಹೇಳಿದ್ದೆವು. ಅಸೆಂಬ್ಲಿಯಲ್ಲಿ ಪಾಸ್ ಮಾಡತಕ್ಕ ಸಂದರ್ಭದಲ್ಲಿ ಸರ್ಕಾರದ ಮೇಲೆ ಸಂಪೂರ್ಣವಾದ ವಿಶ್ವಾಸ ಇಟ್ಟು, ಎಲ್ಲಾ ಸದಸ್ಯರು ಬೆಂಬಲ ಕೊಟ್ಟಿದ್ದರು. ಅದೇ ಸಂದರ್ಭದಲ್ಲಿ ಇದನ್ನು ರಾಜಕೀಯವಾಗಿ ದುರುಪಯೋಗ ಮಾಡುವುದಕ್ಕೆ ಏನಾದರೂ ಇಟ್ಟುಕೊಂಡಿದ್ದೀರಾ ಎಂದು ಆಕ್ಷೇಪಣೆ ಮಾಡಿದರು. ಆ ರೀತಿ ರಾಜಕೀಯ ಉಪಯೋಗಿಸುವುದಿಲ್ಲ ಎನ್ನುವುದು ಸಾಬೀತಾಗಿದೆ. ಕರ್ನಾಟಕ ರಾಜ್ಯದಲ್ಲಿ ಗುಂಡಾಗಿರಿ ಸಂಪೂರ್ಣವಾಗಿ ನಿಂತುಹೋಗಿದೆ ಎಂದು ನಾನು ಒಪ್ಪಿಕೊಂಡಿಲ್ಲ. ನಾವು ಅದನ್ನು ತೆಗೆಯುವುದಕ್ಕೆ ಸಾಕಷ್ಟು ರೀತಿಯಲ್ಲಿ ಇಲ್ಲಿ ಪ್ರಯತ್ನ ಮಾಡುತ್ತೇವೆ. ಇಷ್ಟೇ ನಿಮ್ಮ ಕೈಯಲ್ಲಿ ಏನೂ ಆಗಲ್ಲ ಎನ್ನುವ ತೀರ್ಮಾನಕ್ಕೆ ಬರಬೇಡಿ. ನಾವು ಸಾಕಷ್ಟು ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಹೈಕೋರ್ಟಿನಲ್ಲಿ ಬಿಡುಗಡೆ ಮಾಡಿದ್ದಕ್ಕೆ ಏನೇನು ಆಕ್ಷೇಪಣೆಗಳನ್ನು ಎತ್ತಿದ್ದರು, ಯಾವ ಕಾರಣದಿಂದ ಬಿಡುಗಡೆ ಮಾಡಿದ್ದಾರೆ ಅದರ ಬಗ್ಗೆ ಗಮನದಲ್ಲಿಟ್ಟುಕೊಂಡು ಮುಂದೆ ಸರಿಯಾದ ರೀತಿಯಲ್ಲಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಗೂಂಡಾ ಕಾಯಿದೆಯನ್ನು ಸರಿಯಾದರೀತಿಯಲ್ಲಿ ಏತಕ್ಕೆ ಜಾರಿಗೆ ತರುವುದಕ್ಕೆ ಆಗಿಲ್ಲ ಎನ್ನುವ ಬಗ್ಗೆ ಕಾರಣ ಹೇಳಿದ್ದಾರೆ. ಹೈಕೋರ್ಟಿನವರು ಯಾವ ಕಾರಣಕ್ಕಾಗಿ ಪಜಾ ಮಾಡಿದ್ದಾರೆ ? ಯಾವಾಗ ಮಾಡಿದರು ? ಈ ಕಾರಣವನ್ನು ತಿದ್ದಲು ಸರ್ಕಾರ ಪ್ರಯತ್ನ ಮಾಡಲಿಲ್ಲವೆ? ಅಧಿಕಾರಿಗಳು ಮಾಡಲಿಲ್ಲವೆ? ಈ ವಿಳಂಬಕ್ಕೆ ಕಾರಣ ಏನು ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಕೆಲವು ಟೆಕ್ನಿಕಲ್ ಕಾರಣಗಳಿಗಾಗಿ ಹೈಕೋರ್ಟಿನವರು ಪಜಾ ಮಾಡಿದ್ದಾರೆ ಡೇಟ್ ಕೊಡುವುದರಲ್ಲಿ ತಪ್ಪಾಗಿದೆ, ನಂಬರ್ ಕೊಡುವುದರಲ್ಲಿ ತಪ್ಪಾಗಿದೆ. ಅಧಿಕಾರಿಗಳು ಮಾಡಿದಂಥ ತಪ್ಪು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಕೆಲವು ವಿಚಾರಗಳಲ್ಲಿ ಸಕಾರಣಗಳು ಇಲ್ಲ ಎಂದು ಹೇಳಿದ್ದಾರೆ. ಸಕಾರಣಗಳನ್ನು ಹುಡುಕಿ ಕೊಡಬೇಕಾಗಿರುವ ವಿಚಾರದಲ್ಲಿ ಕೂಡ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಆಡ್ಯಂತಾಯ.—ಸ್ವಾಮಿ, ತಾವು ನನಗೆ ಅವಕಾಶ ಕೊಡುತ್ತೇವೆಂದು ಹೇಳಿದ್ದೀರಿ.

ಅಧ್ಯಕ್ಷರು.—ದಯವಿಟ್ಟು ಕೂತುಕೊಳ್ಳಿ.

ಶ್ರೀ ಆಡ್ಯಂತಾಯ.—ಸ್ವಾಮಿ, ಮಾನ್ಯ ಗೃಹಮಂತ್ರಿಯವರು ಶಾಸಕರ ಮೇಲೆ ಬ್ರಹ್ಮಾಸ್ತ್ರ ಪ್ರಯೋಗ ಮಾಡಿಸಿದ್ದಾರೆ. ನಮ್ಮ ಹೆಂಡತಿ ಮಕ್ಕಳು ಇದ್ದಾಗಲೇ ಪೋಲೀಸಿನವರು ಬಂದು ವಿಚಾರಣೆ ಮಾಡುತ್ತಾರೆ.. ...

ಶ್ರೀ ಗೋಪಾಲ ಮುಕುಂದ ಕಾನಡೆ.—ಕೂಡ್ರಿ ಕೂಡ್ರಿ ಅಂತ ಹೇಳುತ್ತೀರಿ, ನಮಗೆ ರಕ್ಷಣೆ ಇಲ್ಲದೇ ನಾವು ಹೇಗೆ ಕೂತುಕೊಳ್ಳುವುದು. ?

(ಗೊಂದಲ)

ಶ್ರೀ ಬಿ. ರಾಚಯ್ಯ.—ಗೂಂಡಾಗಳು ಯಾವ ಯಾವ ಕಡೆ ಇದ್ದಾರೆ, ಯಾರ ಯಾರ ರಕ್ಷಣೆ ಇದೆ ಎನ್ನುವುದನ್ನು ಇದು ತೋರಿಸುತ್ತೆ.

ಅಧ್ಯಕ್ಷರು.—ದಯವಿಟ್ಟು ಕೂತುಕೊಳ್ಳಿ.

ಶ್ರೀ ಬಿ. ರಾಚಯ್ಯ.—ಗೋಪಾಲ್ ಮುಕುಂದ ಕಾನಡೆ, ರಾವಂಚಂದ್ರ ಕೊತ್ವಾಲ, ಬಂಗಾರಪ್ಪ.

(ಕೆಲವು ಫೋಟೋಗಳನ್ನು ಪ್ರದರ್ಶಿಸಿದರು)

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಮಂತ್ರಿಯವರು ಯಾವ ಪ್ರಶ್ನೆಗೆ ಉತ್ತರ ಹೇಳುತ್ತಿದ್ದಾರೋ ?

(ಗೊಂದಲ)

ಶ್ರೀ ಬಿ. ರಾಚಯ್ಯ.—ಇನ್ನೊಬ್ಬರು ಪರಿಷತ್ತಿನ ಸದಸ್ಯರು.

ಶ್ರೀ ಎಂ.ಎಸ್. ಕೃಷ್ಣನ್.—ಸ್ವಾಮಿ, ನಮಗೇನೂ ಗೊತ್ತಿಲ್ಲ. ಅವರು ಯಾವುದೋ ಫೋಟೋಗಳನ್ನು ತೋರಿಸುತ್ತಿದ್ದಾರೆ.

ಶ್ರೀ ಕೆ.ಪೆಚ್. ಶ್ರೀನಿವಾಸ್.—ಐ ರೈಸ್ ಎ ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.—ದಯವಿಟ್ಟು ಕೂತುಕೊಳ್ಳಿ, ಇದನ್ನು ಅರ್ಧ ಗಂಟೆ ಕಾಲದ ಚರ್ಚೆಗಾಗಿ ಇಟ್ಟು ಕೊಳ್ಳೋಣ

ಶ್ರೀ ಎಂ.ಎಸ್. ಕೃಷ್ಣನ್.—ಆಗಬಹುದು.

ಶ್ರೀ ಬಿ. ರಾಚಯ್ಯ.—ಗೂಂಡಾಗಳು ಯಾರ ಯಾರ ಸಹವಾಸದಲ್ಲಿದ್ದಾರೆ ಎನ್ನುವುದು ಇದರಿಂದ ಗೊತ್ತಾಗುತ್ತದೆ.

ರಾಜ್ಯದಲ್ಲಿ ಗ್ರಾಮೀಣ ಕ್ರೀಡಾ ಶಾಲೆಗಳು

೪೯೧. ಶ್ರೀಮತಿ ಸುಮಾ ವಸಂತ (ವೀರಾಜಪೇಟೆ).—ಮಾನ್ಯ ವಾರ್ತಾ ಪ್ರವಾಸೋದ್ಯಮ ಮಂತ್ರಿ ಯುವ ಜನ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧ ರಾಜ್ಯದಲ್ಲಿ ಗ್ರಾಮೀಣ ಕ್ರೀಡಾ ಶಾಲೆಗಳ ಸಂಖ್ಯೆ ಎಷ್ಟು ?

೨ ೧೯೮೫-೮೬ರ ಸಾಲಿನಲ್ಲಿ ಕ್ರೀಡಾ ಶಾಲೆಗೆ ಎಷ್ಟು ಮಕ್ಕಳನ್ನು ಆರಿಸಲಾಗಿದೆ?

೩ ಯಾವ ಯಾವ ಜಿಲ್ಲೆಯಿಂದ ಅರ್ಜಿ ಬಂದಿದ್ದವು ?

೪ ಯಾವ ಯಾವ ವರ್ಗದವರಿಗೆ ಎಷ್ಟು ಪ್ರಾತಿನಿಧ್ಯ ಕೊಡಲಾಗಿದೆ ?

೫ ಆಯ್ಕೆಯ ಬಗ್ಗೆ ಯಾವುದಾದರೂ ತಕರಾರು ಅಗಿಯೇ ? ಆಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು ?